# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 361 (528) |
| ಉತ್ತರಿಸಬೇಕಾದ ದಿನಾಂಕ | : | 19.08.2026. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿನ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸ್ಥಾಪಿಸಲಾಗಿರುವ ಒಟ್ಟು ಶುದ್ಧ ಕುಡಿಯುವ ನೀರಿನ ಘಟಕಗಳ (RO Plants) ಸಂಖ್ಯೆ ಎಷ್ಟು; ಜಿಲ್ಲಾವಾರು ಮತ್ತು ಗ್ರಾಮೀಣ/ನಗರ ಪ್ರದೇಶವಾರು ಸಂಪೂರ್ಣ ಮಾಹಿತಿ ನೀಡುವುದು); | ಬೆಳಗಾವಿ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಒಟ್ಟು 2956 ಶುದ್ಧ ಕುಡಿಯುವ ನೀರಿನ ಘಟಕಗಳನ್ನು (RO Plants) ಸ್ಥಾಪಿಸಲಾಗಿರುತ್ತದೆ. ಜಿಲ್ಲಾ ಮತ್ತು ತಾಲ್ಲೂಕುವಾರು ಸಂಪೂರ್ಣ ಮಾಹಿತಿಯನ್ನು **ಅನುಬಂಧ-01** ರಲ್ಲಿ ಲಗತ್ತಿಸಿದೆ. |
| ಆ) | ಈ ಪೈಕಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಮತ್ತು ದುರಸ್ತಿಯಲ್ಲಿರುವ ಸ್ಥಗಿತಗೊಂಡಿರುವ) ಘಟಕಗಳ ಸಂಖ್ಯೆ ಎಷ್ಟು; ಇವುಗಳು ಸ್ಥಗಿತಗೊಳ್ಳಲು ಮುಖ್ಯ ಕಾರಣಗಳೇನು; (ಸಂಪೂರ್ಣ ಮಾಹಿತಿ ನೀಡುವುದು); | ಒಟ್ಟು 2956 ಘಟಕಗಳ ಪೈಕಿ, 2243 ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, 713 ಘಟಕಗಳು ದುರಸ್ತಿಯಲ್ಲಿದ್ದು ಸ್ಥಗಿತಗೊಂಡಿರುತ್ತವೆ. ಸಂಪೂರ್ಣ ಮಾಹಿತಿಯನ್ನು **ಅನುಬಂಧ-01** ರಲ್ಲಿ ಲಗತ್ತಿಸಲಾಗಿದೆ. ಸದರಿ ಘಟಕಗಳು ಕಚ್ಚಾ ನೀರಿನ ತೊಂದರೆ, ಯಂತ್ರಗಳಲ್ಲಿನ ದುರಸ್ತಿಯಿಂದಾಗಿ ಹಾಗೂ ಕೆಲವು ಘಟಕಗಳು ವಿದ್ಯುತ್ ಸಂಪರ್ಕ ಮತ್ತು ಸ್ಥಳಾಂತರಿಸುವ ಅವಶ್ಯಕತೆಯ ಮೇರೆಗೆ ಸ್ಥಗಿತಗೊಂಡಿರುತ್ತದೆ. |
| ಇ) | ದುರಸ್ತಿಯಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸಾರ್ವಜನಿಕರ ಬಳಕೆಗೆ ಯೋಗ್ಯವಾಗಿಸಲು ಸರ್ಕಾರ ಹಮ್ಮಿಕೊಂಡಿರುವ ಕ್ರಮಗಳೇನು; ಇವುಗಳ ಪುನಶ್ಚೇತನಕ್ಕೆ ನಿಗದಿಪಡಿಸಲಾದ ಕಾಲಮಿತಿ ಹಾಗೂ ಅನುದಾನ ಎಷ್ಟು; | ದುರಸ್ತಿಯಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪುನಶ್ಚೇತನಗೊಳಿಸಿ ಸಾರ್ವಜನಿಕರ ಬಳಕೆಗೆ ಯೋಗ್ಯವಾಗಿಸಲು ಸರ್ಕಾರದಿಂದ External Aided Project (EAP) ನಡಿ 2025-26 ಮತ್ತು 2026-27 ನೇ ಸಾಲಿನಲ್ಲಿ ಅನುದಾನ ಹಂಚಿಕೆಮಾಡಿ ಪ್ರಸಕ್ತ ಸಾಲಿನಲ್ಲಿಯೇ ಆದ್ಯತೆ ಮೇರೆಗೆ ದುರಸ್ತಿ ಕಾರ್ಯ ಕೈಗೊಂಡು ಪುನಶ್ಚೇತನಗೊಳಿಸಲು ಸೂಚಿಸಲಾಗಿದೆ. ಅನುದಾನದ ವಿವರಗಳು ಕೆಳಕಂಡಂತಿವೆ. |

| | | |
|---|---|---|
| | | <table><tr><th rowspan="2">ಜಿಲ್ಲೆ</th><th colspan="2">ಅನುದಾನ (ರೂ. ಲಕ್ಷಗಳಲ್ಲಿ)</th></tr><tr><th>EAP-2025-26</th><th>EAP 2026-27</th></tr><tr><td>ಬೆಳಗಾವಿ</td><td>84.50</td><td>118.50</td></tr><tr><td>ಬಾಗಲಕೋಟೆ</td><td>55.00</td><td>54.00</td></tr><tr><td>ವಿಜಯಪುರ</td><td>121.50</td><td>186.00</td></tr><tr><td>**ಒಟ್ಟು**</td><td>**261.00**</td><td>**358.50**</td></tr></table> |
| ಈ) | ಶುದ್ಧ ಕುಡಿಯುವ ನೀರಿನ ಘಟಕಗಳ ನಿರಂತರ ನಿರ್ವಹಣೆಗಾಗಿ (Maintenance) ಖಾಸಗಿ ಏಜೆನ್ಸಿ ಅಥವಾ ಸ್ಥಳೀಯ ಸಂಸ್ಥೆಗಳೊಂದಿಗೆ ಮಾಡಿಕೊಳ್ಳಲಾದ ಒಪ್ಪಂದಗಳೇನು; ಕಳಪೆ ನಿರ್ವಹಣೆ ಮಾಡುತ್ತಿರುವ ಸಂಸ್ಥೆಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಶಿಸ್ತು ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು); | ಸದರಿ ಘಟಕಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಇಲಾಖೆಯಿಂದ ಟೆಂಡರ್ ಆಹ್ವಾನಿಸಿ ಗುತ್ತಿಗೆದಾರರಿಗೆ ವಹಿಸಲಾಗಿರುತ್ತದೆ. ಗುತ್ತಿಗೆ ಅವಧಿ ಪೂರ್ಣಗೊಂಡ ಘಟಕಗಳನ್ನು ಸುತ್ತೋಲೆ ಸಂಖ್ಯೆ: ಗ್ರಾಅಪ/21/ಗ್ರಾನೀಸ(8)/ 2017 / 918 ದಿನಾಂಕ: 21.09.2024 ರನ್ವಯ ಆಯಾ ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸಲು ಸೂಚಿಸಲಾಗಿರುತ್ತದೆ.<br>ಪಂಚಾಯಿತಿಗಳಿಗೆ ಹಸ್ತಾಂತರಿಸಿರುವ ಹಾಗೂ ನಿರ್ವಹಣೆಗಾಗಿ ಗುತ್ತಿಗೆದಾರರಿಗೆ ವಹಿಸಲಾಗಿರುವ ಪ್ರತೀ ಘಟಕಕ್ಕೆ ಇಲಾಖೆಯಿಂದ ಮಾಹೆಯಾನ ರೂ.3,000/- ಪಾವತಿಸಲು ಅವಕಾಶ ಕಲ್ಪಿಸಲಾಗಿ ತ್ತದೆ.<br>ಗುತ್ತಿಗೆದಾರರಿಂದ ನಿರ್ವಹಿಸಲಾಗುತ್ತಿರುವ ಘಟಕಗಳಲ್ಲಿ ಈವರೆಗೆ ಯಾವುದೇ ಕಳಪೆ ಕಾಮಗಾರಿ ವರದಿಯಾಗಿರುವುದಿಲ್ಲ. ನಿರ್ವಹಣೆ ಕುರಿತು ದೂರುಗಳಿ ಸ್ವೀಕೃತವಾದಲ್ಲಿ ಪರಿಶೀಲಿಸಿ ಗುತ್ತಿಗೆ ಕರಾರಿನನ್ವಯ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |

ಗ್ರಾಕುನೀ&ನೈಇ/ಮುಇಂ/ತಾಂತ್ರಿಕ/219/2026-27

(signature)

**(ಈಶ್ವರ್ ಖಂಡ್ರೆ)**,
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು.

ಅನುಬಂಧ-1

**ಶುದ್ಧ ಕುಡಿಯುವ ನೀರಿನ ಘಟಕಗಳ ತಾಲ್ಲೂಕುವಾರು ಮಾಹಿತಿ**

| ಕ್ರ. ಸಂ. | ಜಿಲ್ಲೆ/ವಿಭಾಗ | ತಾಲ್ಲೂಕು | ಒಟ್ಟು ಘಟಕಗಳ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ಘಟಕಗಳ ಸಂಖ್ಯೆ | ದುರಸ್ತಿಯಲ್ಲಿರುವ ಘಟಕಗಳ ಸಂಖ್ಯೆ |
|---|---|---|---|---|---|
| 1 | ಬೆಳಗಾವಿ/ ಬೆಳಗಾವಿ | ಬೆಳಗಾವಿ | 125 | 95 | 30 |
| | | ಬೈಲಹೊಂಗಲ | 136 | 109 | 27 |
| | | ಖಾನಾಪುರ | 93 | 82 | 11 |
| | | ರಾಮದುರ್ಗ | 131 | 124 | 7 |
| | | ಸವದತ್ತಿ | 130 | 98 | 32 |
| | | **ಒಟ್ಟು** | **615** | **508** | **107** |
| 2 | ಬೆಳಗಾವಿ/ ಚಿಕ್ಕೋಡಿ | ಅಥಣಿ | 154 | 145 | 9 |
| | | ಚಿಕ್ಕೋಡಿ | 179 | 142 | 37 |
| | | ಗೋಕಾಕ | 126 | 91 | 35 |
| | | ಹುಕ್ಕೇರಿ | 149 | 121 | 28 |
| | | ರಾಯಬಾಗ | 107 | 94 | 13 |
| | | **ಒಟ್ಟು** | **715** | **593** | **122** |
| 3 | ಬಾಗಲಕೋಟೆ | ಬಾಗಲಕೋಟೆ | 114 | 107 | 7 |
| | | ಬಾದಾಮಿ | 181 | 112 | 70 |
| | | ಬೀಳಗಿ | 83 | 81 | 2 |
| | | ಹುನಗುಂದ | 138 | 103 | 35 |
| | | ಜಮಖಂಡಿ | 112 | 97 | 14 |
| | | ಮುಧೋಳ | 152 | 125 | 27 |
| | | **ಒಟ್ಟು** | **780** | **625** | **155** |
| 4 | ವಿಜಯಪುರ | ವಿಜಯಪುರ | 193 | 168 | 25 |
| | | ಬಸವನ ಬಾಗೇವಾಡಿ | 165 | 100 | 65 |
| | | ಇಂಡಿ | 192 | 102 | 90 |
| | | ಮುದ್ದೇಬಿಹಾಳ | 188 | 98 | 90 |
| | | ಸಿಂದಗಿ | 108 | 49 | 59 |
| | | **ಒಟ್ಟು** | **846** | **517** | **329** |
| | ಒಟ್ಟು | | **2956** | **2243** | **713** |